ಕುಂತಿತ್ತು. ಅರೆ ಮನೆಯೊಳಗೆ ತಿರುಮಲನೆ ಸರಕ್ಕನೆ ಹಾದು ಹೋದಂತೆ, ಒಮ್ಮೊಮ್ಮೆ ಕರೆದಂತ ಭಾಸವಾಗಿ ಜೀವ ಬೆಚ್ಚುತ್ತದೆ. ಪುಟ್ಟತ್ತೆ ಗಿಡ್ಡಾದ ಹಳೆಯ ಬಿಗಿ ಸ್ವೆಟರ್ ಹಾಕಿ ಮುದಿ ಗೂಗೆಯಂತೆ ಬಚ್ಚಲ ಒಲೆ ಎದುರು ಅನಂತ ಕಾಲದಿದೆಂಬಂತೆ ಕೂತು ಹಲಸಿನ ಬೇಳೆ ಸುಡುತ್ತ ಬೇಸರವ ಆಕಳಿಸುವಳು. ಮಾತುಕತೆಯಿಲ್ಲದೆ ಮೌನ್ನರಾಗಿ ಯುಗಗಳೇ ಸಂದಿವೆ. ಬೇಸರದ ಮಂಪರಿನಲ್ಲಿ ಮಂದ ಮತಿಗಳಂತೆ, ಅಂತರ್ ಪಿಶಾಚಿಗಳಂತೆ ನಿದ್ದೆಗಣ್ಣಲ್ಲಿ ಓಡಾಡುವಂತೆ ಅವರು ಕಾಣುತ್ತಿದ್ದರು. ಅಟ್ಟದಲ್ಲಿ ಇಲಿಗಳ ಆಟ, ಕಾಲ ಬೆರಳ ಸಂಧಿಯಲ್ಲಿ ಉಂಬಳ ಹೀರಿದ ರಕ್ತ; ಕೊಟ್ಟಿಗೆಯಲ್ಲಿ ಕೆಂಪಿ ದಣಕಲಿಗೆ ಕೋಡು ಉಜ್ಜುವಾಗಿನ ಸದ್ದು ಮಾತ್ರದಿಂದ ಉಸಿರಾಡುವ ಜಗತ್ತಿದೆ ಎಂದು ನಂಬಬೇಕು. ತಿರುಮಲನಿಗೆ ಇಷ್ಟವಾಗಿದ್ದ ಚೌಡಿ ಹೊಂಡದ ಪಾರಿಜಾತದ ಕಂಪು ಸುಳಿದಾಗ ಯಾತನೆಯಾಗುತ್ತದೆ. ರಾತ್ರಿ ನಡುವೆ ಎಚ್ಚರಾದಾಗ ಆದಿ ಅಂತ್ಯವಿಲ್ಲದ ಭೋರ್ಗುಡುವ ಪ್ರಳಯದ ದುಃಸ್ವಪ್ನದಲ್ಲಿ ಕೊಚ್ಚಿಹೋಗುತ್ತಿರುವ ಭ್ರಮೆ. ಎಲೆಗಳ ಮೇಲೆ ಹೊಳೆಯುವ ಒದ್ದೆ ಬೆಳದಿಂಗಳಲ್ಲಿ ಯಾರೊ ಬಿಕ್ಕಿದಂತೆ. ದೇವರೆ ಕಣ್ತೆರದಂತೆ ತಿರುಮಲ ಎಂದಿನಂತೆ ಮಿಲ್ಲಿಂದ ಒಂದು ಚಕ್ಕಡಿ ಅಕ್ಕಿಯನ್ನು ಸಾಗಿಸಿ ಮಳೆಗಾಲಕ್ಕೆ ದಾಸ್ತಾನು ಮಾಡಿದ್ದ. ಮಾಡಿನ ಹಂಚು ದುರಸ್ತಿಯಾಗಿರಲಿಲ್ಲ; ಪುಟ್ಟತ್ತೆಗೆ ತೊಟ್ಟಿಕ್ಕುವ ಜಾಗದ ಮೇಲೆ ಪಾತ್ರೆ ಇಡುವುದೆ ಕೆಲಸ; ತಿರುಮಲನಿಲ್ಲದ ಮೊದಲ ಮಳೆಗಾಲ ಬಣಬಣಗುಡುತ್ತಿತ್ತು. ನಾಗರಪಂಚಮಿಗೆ ಒಬ್ಬೊಟ್ಟು ಮಾಡಬೇಕನಿಸಲಿಲ್ಲ. ಸುನೇರಿ ಬಣ್ಣದಲ್ಲಿ ಇಂಗ್ಲಿಷ್ ಅಕ್ಷರದಲ್ಲಿ ತಿರುಮಲ ಹೆಸರು ಬರೆದ ಹಳೆ ಕೊಡೆ ಕಡ್ಡಿಯನ್ನು ದಾರ ಕಟ್ಟಿ ದುರಸ್ತಿ ಮಾಡಿದಳು. ಸಂಪದ ಬಾರದೆ ಮನೆ ಮತ್ತಷ್ಟು ಬಿನ್ನಗೆನಿಸಿತು. ತಿರುಮಲ ಆಡಿದ ಮಾತು ತ್ರಿಕಾಲ ಸತ್ಯದಂತೆ ಮತ್ತೆ ಮತ್ತೆ ನೆನಪಾಗುತ್ತದೆ. ಪುಟ್ಟತ್ತೆಯ ಹೆದರಿದ ಜೀವ, 'ತಮ್ಮ ಹೇಳಿಕ್ಕೋದದ್ದು ಕರೇನೆ ಇಲ್ಲಿ ಉಳ್ಕಂಬುದು ಕಷ್ಟವೇ' ಎಂದು ತಳಮಳಿಸುತ್ತದೆ.

ಸಂಪದ ಒಲೆಯ ಮೇಲೆ ಅನ್ನದ ಎಸರಿಟ್ಟಿದ್ದಾಳೆ; ನಂದಾದೀಪ ಬೆಳಗಿದ್ದಾಳೆ. ಬಾಳೆ ಎಲೆ ತೊಳೆದು, ಮಣೆ ಆನಿಸಿಟ್ಟಿದ್ದಾಳೆ. ಅಪ್ಪನಿಲ್ಲದ ಸ್ಥಿತಿಯಲ್ಲಿ ತನ್ನ ಕರ್ತವ್ಯ ಏನೆಂದು ಅವಳಲ್ಲಿ ತಿಳಿವಳಿಕೆ ಮೂಡಿದೆ. ಮನೆ, ಜಮೀನು ಮಾರಿ ಪೇಟೆಗೆ ಹೋಗಿ ಉಳಿಯಬೇಕೆಂಬ ತಿರುಮಲನ ಆಸೆಯನ್ನು ಮೊದಮೊದಲು ಅವಳು ವಿರೋಧಿಸಿದವಳೇ. "ಅಮ್ಮಾ, ಆನು ಹುಟ್ಟಿದ್ದು ಬೆಳೆದದ್ದು ಇಲ್ಲೆ ಅಲ್ದಾ. ಎನಗೆ ಎನ್ನ ಮನೆ ಊರು ಅನ್ನೋದು ಇಲ್ಲಿ ಮಾತ್ರ... ಅದು ದುಡ್ಡು ಕೊಟ್ರೂ ಬೇರೆ ಬದಿಗೆ ಸಿಗ್ತಿಲ್ಲೆ" ಎಂದಿದ್ದಳು. ಅದು ಅವಳ ಮುದ್ದಾದ ಮುಗ್ಧ ಭಾವ. ಅವಳ ಬಾಲ್ಯದ ನೆನಪು ಈ ಮನೆಯ ಭೂಗೋಲದ ವಾಸ್ತುವಿನಲ್ಲೆ ತುಂಬಿದೆ. ಕಾಗದದಂತೆ ಕತ್ತರಿಸಿ ಎಲ್ಲೆಂದರಲ್ಲಿ ಅಂಟಿಸಲಾದೀತೆ? ತಿರುಮಲ ಯೋಚಿಸಿದ್ದು ಸರಿಯೇ. ಭಯಂಕರ ಕಾಡಿನಲ್ಲಿ ಒಂದೇ ಮನೆ; ಒಂಟಿ ಜೀವ. ಸಾಮಾನು, ಔಷಧ, ದುಡ್ಡು ಎಲ್ಲದಕ್ಕೂ ಎಂಟು ಮೈಲಾಚೆಯ ಮಂಚಿಕೇರಿ ಪೇಟೆಗೆ ಕಾಲ್ನಡಿಗೆಯಲ್ಲಿ ಹೋಗಿಬರಬೇಕು. ಕರೆಂಟು, ಫೋನು ವರ್ಷಕ್ಕೆ ನಾಲ್ಕು ತಿಂಗಳು ದುರಸ್ತಿಯಲ್ಲಿದ್ದರೆ ಪುಣ್ಯ. ಹಾಡೇ ಹಗಲು ಕಳ್ಳರು ನುಗ್ಗಿದರೆ ಯಾರಿಗೂ ಅಂತಪಾರಾಗದು. ಸಂಪದ ಈಗ ಓದಲು ಹೊರಗಿದ್ದಾಳೆ; ನಾಳೆ ನೌಕರಿಯೊ ಮದುವೆಯೊ ಅಂತು ಅವಳು ಇಲ್ಲಿ ಉಳಿಯಲಾರಳು. ಏಳೆತ್ತೆ ತನಕ ಸಂಪದ ಅಜ್ಜಿಯ ಮನೆಯಲ್ಲಿದ್ದು ಶಾಲೆಗೆ ಹೋದಳು; ಆಮೇಲೆ ಹೈಸ್ಕೂಲಿಗೆ ಮಂಚಿಕೇರಿಗೆ ಬರಬೇಕಾಯಿತು. ತಿರುಮಲ ಅನುದಿನ ಮುಂಜಾನೆ ಮತ್ತು ಸಂಜೆ ಮಗಳನ್ನು ಬೈಕಿನ ಮೇಲೆ ಕಳಿಸಿ, ಕರೆತಂದು ಮಾಡಿದ. ಈಗ ಕಾಲೇಜಿಗೆ ಹೋಗುತ್ತಿದ್ದಾಳೆ; ಅವಳೇನು ಓದುತ್ತಿದ್ದಾಳೆಂದು ತನಗೆ ಗೊತ್ತಿಲ್ಲ;